**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**
**ಸಿ.ಸಿ. ನಂ. 622/2019**

**ಪಿ.ಡಬ್ಲ್ಯೂ: 1**

**ಸಾಕ್ಷಿಗೆ ದಿನಾಂಕಃ 02.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

## ಮುಂದುವರೆದ ಪಾಟೀ ಸವಾಲುಃ ಆರೋಪಿ ನಂ 2 ರ ಪರ ಶ್ರೀಮತಿ ಬಿ ಎಚ್ ಎಲ್ ವಕೀಲರಿಂದ

1. ದಿಃ 30.11.2018 ರಂದು ನಾನು ಪೋಲಿಸರಿಗೆ ನೀಡಿದ ಮರು ಹೇಳಿಕೆಯ ಸಾರಾಂಶ ಗೊತ್ತಿರುತ್ತದೆ. ಸದರಿ ಹೇಳಿಕೆಯಲ್ಲಿ ನಮೂದು ಇರುವಂತೆ ವಿಠಲ್ ರಾವ್ ರವರು ಸಭೆಗೆ ಹೋದ ಬಗ್ಗೆ ವಿಠಲ್ ರಾವ್ ರವರ ಮುಖಾಂತರವೇ ತಿಳಿಯಿತು. ನಾನು ಚೆಕ್ ಕಳೆದು ಹೋದ ಬಗ್ಗೆ ಅವರಿಗೆ ಕೇಳಿದಾಗ ತಾನು ಸಭೆಗೆ ಹೋದ ಬಗ್ಗೆ ನನಗೆ ತಿಳಿಸಿದರು. ಅವರು ದಿಃ 14.10.2015 ರಂದು ಸಭೆಗೆ ಹೋದ ಬಗ್ಗೆ ತಿಳಿಸಿದರು. ವಿಠಲ್ ರಾವ್ ರವರು 14.10.2015 ರಂದು ಬ್ಯಾಂಕಿನಲ್ಲಿ ಇರಲಿಲ್ಲ. ದಿಃ 14.10.2015 ರಂದು ದಾಖಲೆಗಳನ್ನು ರಾಮುರವರಿಗೆ ಕೊಡಿ ಎಂದು ಬ್ಯಾಂಕಿನ ಸಿಬ್ಬಂದಿ ಹೇಳಿದರು. ಸದರಿ ಬ್ಯಾಂಕ್ ಸಿಬ್ಬಂದಿ ಹೆಸರು ಗೊತ್ತಿಲ್ಲ. 2 ನೇ ಆರೋಪಿ ರಾಮುರವರು ನಾನು ಕೊಟ್ಟ ದಾಖಲೆಯನ್ನು ಬ್ಯಾಂಕಿನ ಮೊದಲ ಮಹಡಿಯ ತನ್ನ ಕ್ಯಾಬಿನ್ ನಲ್ಲಿ ಪಡೆದರು. ವಿಠಲ ರಾವ್ ಹಾಗೂ ಆರೋಪಿ ನಂ 2 ರವರ ಕ್ಯಾಬಿನ್ ಎಲ್ಲಿ ಇತ್ತು ಅಂತಾ ನನಗೆ ಮೊದಲೆ ಗೊತ್ತಿತ್ತು ಎಂದರೆ ಸರಿ. ವಿಠಲರಾವರವರ ಟೇಬಲ್ ಡ್ರಾ ದಲ್ಲಿ ರಾಮು ರವರು ನಾನು ನೀಡಿದ ದಾಖಲೆಯನ್ನು ಇಟ್ಟಿದ್ದರು ಎಂಬುದು ನನ್ನ ಹೇಳಿಕೆ ಆಗಿರುವುದಿಲ್ಲ. ರಾಮು ರವರು ತಮ್ಮ ಟೇಬಲ್ ಡ್ರಾ ದಲ್ಲಿಯೇ

ಇಟ್ಟುಕೊಂಡಿದ್ದರು ಎಂದು ಬ್ಯಾಂಕಿನ ಮ್ಯಾನೇಜರ್ ಹೇಳಿರುತ್ತಾರೆ. 2 ನೇ ಆರೋಪಿ ನನ್ನಿಂದ ಯಾವುದೇ ದಾಖಲೆ ಪಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯು ನಿಪಿಃ 9 ರಲ್ಲಿನ ದಾಖಲೆ ಪ್ರಕಾರ ನನ್ನಿಂದ ದಾಖಲೆಯನ್ನು ಪಡೆದಿರುತ್ತಾರೆ. ನಿಪಿಃ 9 ರಲ್ಲಿನ ಬ್ಯಾಂಕಿನ ಸೀಲ್ ಮದ್ಯದಲ್ಲಿ ಇರುವುದು 2 ನೇ ಅರೋಪಿ ಸಹಿ ಇರುತ್ತದೆ. ನಾನು ದಾಖಲೆಯನ್ನು 2 ನೇ ಆರೋಪಿಗೆ ನೀಡಿದ ಬಗ್ಗೆ ಪೋಟೋ ಅಥವಾ ಸಿ ಸಿ ಟಿವಿ ಪುಟೇಜ್ ನೀಡಿರುವುದಿಲ್ಲ. 2 ನೇ ಆರೋಪಿ ದಾಖಲೆ ಪಡೆದ ಬಗ್ಗೆ ಬ್ಯಾಂಕ್ ನವರು ನೀಡಿದ ಮಾಹಿತಿಯಂತೆ ನಾನು ಹೇಳಿರುತ್ತೇನೆ. ಬ್ಯಾಂಕ್ ನವರ ಮಾತು ಕೇಳಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಅರೋಪಿಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಿಠಲರಾವರವನ್ನು ಈ ಪ್ರಕರಣದಿಂದ ಖುಲಾಸೆ ಗೊಳಿಸಿ 2 ನೇ ಆರೋಪಿಯನ್ನು ಉದ್ದೇಶಪೂರ್ವಕವಾಗಿ ಈ ಪ್ರಕರಣದಲ್ಲಿ ಸಿಲುಕಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು-ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**